ನ್ಯಾಯಾಲಯದಲ್ಲಿದ್ದರೂ ಕೊಡಬೇಕಾಗಿತ್ತು. ಎಷ್ಟು ದಿನಗಳವರೆಗೆ ನ್ಯಾಯಾಲಯದಲ್ಲಿ ಇರುವುದು? ನ್ಯಾಯಾಲಯಕ್ಕೆ ಹೋಗುವುದು ಬರುವುದು ಆದರೆ ಬಡ ಹುಡುಗರ ಗತಿ ಏನಾಗಬೇಕು? ಸರ್ಕಾರದವರು ಏನು ಕ್ರಮ ಕೈಗೊಳ್ಳುತ್ತಿದ್ದೀರಿ? ದಾವಾ ಅರ್ಜಿಗಳನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಈ ಬಗ್ಗೆ ಖಚಿತವಾದ ಉತ್ತರ ಹೇಳಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ:- ೧೦೩೧ ಸಂಖ್ಯೆ ಇರುವುದರಿಂದ ಟೈಪ್ ಮಾಡಿಕೊಡಬೇಕಾದರೆ ಸ್ವಲ್ಪ ತೊಂದರೆಯಾಗಿದೆಯೆಂದು ಆ ಲಿಸ್ಟ್ ಇನ್ನೂ ಒದಗಿಸಿಲ್ಲ. ನ್ಯಾಯಾಲಯದಲ್ಲಿ ಇದೆ. ಅವರು ಸ್ಟೇ ಕೊಟ್ಟಿದ್ದಾರೆ. ಕೆಲವು ಕಡೆ ಸ್ಟೇ ಕೊಟ್ಟಿದ್ದಾರೆ, ಕೆಲವು ಕಡೆ ಕೊಟ್ಟಿಲ್ಲ. ಮ್ಯಾಟರ್ ಸಬ್‌ಜುಡಿಸ್ ಇದೆ. ಸ್ಟೇ ವೆಕೇಟ್ ಮಾಡಿಸಿ ಜಾರಿಗೆ ಕೊಡಬೇಕೆಂದು ಪ್ರಯತ್ನ ಮಾಡುತಿದ್ದೇವೆ. ಹೈಕೋರ್ಟಿನವರು ಲಿಸ್ಟ್ ಪಬ್ಲಿಷ್ ಮಾಡಬಾರದೆಂದು ಸ್ಟೇ ಕೊಟ್ಟರು. ಆ ತೊಂದರೆಯಿಂದ ಇದನ್ನು ಇಷ್ಯೂ ಮಾಡುವುದಕ್ಕಾಗಲಿಲ್ಲ.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ:- ಲಿಸ್ಟ್ ಕೊಡಬಾರದೆಂದು ಏನಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ:- ಲಿಸ್ಟ್ ಪಬ್ಲಿಷ್ ಮಾಡಬಾರದೆಂದು ಸ್ಟೇ ಇದೆ.

ವಿಷಯ:- ಬೆಳೆ ವಿಮಾ ಯೋಜನೆ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ ೫೦:- (೧೪೯)
ಶ್ರೀ ಜಿ.ಎಸ್. ಆಚಾರ್ (ಬೈಂದೂರು)
ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳೆ ವಿಮಾ ಯೋಜನೆಯನ್ನು ಬೆಳೆ ಸಾಲದ ವಿಮಾ ಯೋಜನೆಯನ್ನಾಗಿ ಅನುಷ್ಠಾನ ಮಾಡಲಾಗುವುದು ಸರಿಯೇ?
ಆ) ನಿಜವಾಗಿ ಹಾನಿ ಆದ ಬೆಳೆಯ ನಷ್ಟವನ್ನು ಗಮನಕ್ಕೆ ತೆಗೆದುಕೊಳ್ಳದೆ, ತಾಲ್ಲೂಕಿನ ಯಾವುದೋ ಭಾಗದಲ್ಲಿ ಉತ್ಪತ್ತಿಯ ಪರಿಶೀಲನೆ ನಡೆಸಿ, ಬೆಳೆ ವಿಮೆಯ ಪರಿಹಾರ ನೀಡುವುದು ಸರಿಯೇ?
ಇ) ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರದ ಕ್ರಮವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ
ಕೃಷಿ ಸಚಿವರು

ಇಲ್ಲ.

ಈ ಯೋಜನೆಯನ್ನು ಸಾಮೂಹಿಕ ಆಧಾರದ ಮೇಲೆ ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾದ ಮಾರ್ಗಸೂಚಿಯಂತೆ, ಪ್ರತಿಯೊಂದು ಆರಿಸಿದ ಬೆಳೆಗೂ, ನಿರ್ಧರಿತ ಕ್ಷೇತ್ರದಲ್ಲಿ ೧೬ ಬೆಳೆ ಕಟಾವು ಸಮೀಕ್ಷೆಗಳನ್ನು ವೈಜ್ಞಾನಿಕವಾಗಿ ನಡೆಸಬೇಕಾಗುವುದು ಮತ್ತು ನಿರ್ಧರಿತ ಕ್ಷೇತ್ರದ ಪ್ರಾರಂಭಿಕ ಇಳುವರಿಯನ್ನು ನಿರ್ಧರಿತ ಕ್ಷೇತ್ರದ ೫ ವರ್ಷಗಳ ಸರಾಸರಿ ಇಳುವರಿಯ ಆಧಾರದ ಮೇಲೆ ನಿರ್ಣಯಿಸಬೇಕಾಗುತ್ತದೆ. ಈಗ ಸದ್ಯಕ್ಕೆ ಈ ವಿವರಗಳು ತಾಲ್ಲೂಕು ಮಟ್ಟದಲ್ಲಿ ಮಾತ್ರ ಇರುವುದರಿಂದ ಕರ್ನಾಟಕದಲ್ಲಿ ತಾಲ್ಲೂಕನ್ನು ನಿರ್ಧರಿತ ಕ್ಷೇತ್ರವನ್ನಾಗಿ ಆರಿಸಲಾಗಿದೆ. ಆದುದರಿಂದ ಈ ಯೋಜನೆಯಡಿಯಲ್ಲಿ ತಾಲ್ಲೂಕಿನ ಹಾನಿ ಆದ ಭಾಗದ ಬೆಳೆಯ ಇಳುವರಿಯನ್ನು ಮಾತ್ರ ಗಣನೆಗೆ ತೆಗೆದುಕೊಂಡು ಪರಿಹಾರವನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ.

ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಬೆಳೆ ಕಟಾವು ಸಮೀಕ್ಷೆಗಳನ್ನು ಇನ್ನುಮುಂದೆ ಮಂಡಲ ಮಟ್ಟದಲ್ಲಿ ನಡೆಸಬೇಕಾಗುವುದು. ಇದಲ್ಲದೇ, ಸಾಲ ಪಡೆಯದೇ ಇರುವ ರೈತರೂ ಸಹಾ ವಿಮಾ ಯೋಜನೆಯಲ್ಲಿ ಪಾಲುಗೊಳ್ಳುವ ಅವಕಾಶವಿರಬೇಕು. ಈ

ನಿಟ್ಟಿನಲ್ಲಿ ಹೆಚ್ಚು ಕ್ರಿಯಾಶೀಲ ಮಾರ್ಗದರ್ಶಿಗಳನ್ನು ರೂಪುಗೊಳಿಸಲು ಹಾಸನ ಜಿಲ್ಲೆಯಲ್ಲಿ ಎಲ್ಲಾ ಬೆಳೆಗಳನ್ನು ಹಾಗೂ ಬೆಳೆಗಾರರನ್ನು ಒಳಗೊಂಡಂತೆ ಬೆಳೆ ವಿಮಾ ಯೋಜನೆಯನ್ನು ಪ್ರಯೋಗಾತ್ಮಕವಾಗಿ, ಅನುಷ್ಠಾನ ತರಲು ಕೇಂದ್ರ ಸರ್ಕಾರದ ನೆರವಿನೊಂದಿಗೆ, ಯೋಜಿಸಲಾಗಿದೆ. ಈ ಪ್ರಯೋಗಾತ್ಮಕ ಯೋಜನೆಯ ಆಧಾರದ ಮೇಲೆ ಬೆಳೆ ವಿಮಾ ಯೋಜನೆಯ ಆಧಾರದ ಮೇಲೆ ಬೆಳೆ ವಿಮಾ ಯೋಜನೆಯಲ್ಲಿ ಸೂಕ್ತ ಪರಿವರ್ತನೆಗಳನ್ನು ತರಲಾಗುವುದು.

ಶ್ರೀ ಜಿ.ಎಸ್. ಆಚಾರ್:- ತಮ್ಮ ಉತ್ತರದಲ್ಲಿ ನನ್ನ ಹೆಸರು ತಪ್ಪಾಗಿ ಅಚ್ಚಾಗಿದೆ. ಅದನ್ನು ಸರಿಪಡಿಸಕೊಳ್ಳಬೇಕು ಎಂದು ಹೇಳಿ ಈ ಪ್ರಶ್ನೆ ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಕೊಟ್ಟಿರತಕ್ಕ ಉತ್ತರ ನನ್ನ ಎದುರಿಗೆ ಇದೆ. ಇದರಲ್ಲಿ ಏನು ತೊಂದರೆ ಎಂದು ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿಸಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಸಿದ್ದನಿದ್ದೇನೆ. ತಾವು ೧೪ನೇ ಪ್ರಶ್ನೆ ಕೇಳಿದ್ದೀರಿ, ಉತ್ತರ ಒದಗಿಸಿದ್ದೇನೆ. ಇದರಲ್ಲಿ ಸ್ಪಷ್ಟತೆ ಏನಾದರೂ ಬೇಕಾಗಿದ್ದರೆ ಅಥವಾ ಹೆಚ್ಚು ವಿವರ ಬೇಕಾಗಿದ್ದರೆ ಕೇಳಿದರೆ ಉತ್ತರಿಸುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಜಿ.ಎಸ್. ಆಚಾರ್:- ಈ ಪ್ರಶ್ನೆಯನ್ನು ನಾನು ಇಲ್ಲಿ ಶಾಸಕನಾದಾಗಿನಿಂದ ಅಂದರೆ ಕಳೆದ ೭-೮ ವರ್ಷಗಳಿಂದ ಕೇಳುತ್ತಿದ್ದೇನೆ. ಇದು ಸಾಲ ಕೊಟ್ಟವರಿಗೆ, ಸಾಲ ಪಡೆದವರಿಗೆ ಮಾತ್ರ ಜಾರಿಗೆ ತರುವಂತಹ ಯೋಜನೆ. ಸಮರ್ಪಕವಾಗಿ ಎಲ್ಲಾ ರೈತರಿಗೆ ಬರುವಂಥ ಯೋಜನೆ ಅಲ್ಲ. ಸಾಲ ಪಡೆದವರು ಏನು ಪಾಪ ಮಾಡಿದ್ದಾರೆ. ಸಾಲ ಪಡೆದವರಿಗೆ ಬಲಾತ್ಕಾರವಾಗಿ ಕ್ರಾಪ್ ಇನ್‌ಶ್ಯೂರೆನ್ಸ್ ಲಗಾವು ಮಾಡುವ ಯೋಜನೆ ಏತಕ್ಕೆ?

ಎರಡನೆಯದಾಗಿ, ಕರ್ನಾಟಕದಲ್ಲಿ ಇದಕ್ಕೆ ಬೇಕಾದಂಥ ದಾಖಲೆಗಳು ತಾಲ್ಲೂಕು ಮಟ್ಟದಲ್ಲಿ ಮಾತ್ರ ಇರುವುದರಿಂದ ಮಂಡಲ್ ಮಟ್ಟದಲ್ಲಿ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ವೈಜ್ಞಾನಿಕವಾದ ಸರ್ವೆ ಆಧಾರದ ಮೇಲೆ ಮಾಡುತ್ತೇವೆ. ನಮ್ಮ ಗ್ರಾಮಗಳಲ್ಲಿ ನಾವು ಕಂಡುಕೊಂಡ ಪ್ರಕಾರ, ಯಾವ ವೈಜ್ಞಾನಿಕ ಸರ್ವೆಯೂ ಇಲ್ಲ. ತಾಲ್ಲೂಕಿನಲ್ಲಿ ಎಲ್ಲಿಯೋ ಒಂದಾಕಡೆ ರ್ಯಾಂಡಾ ಸರ್ವೆ ಮಾಡಿ, ಇದರ ಆಧಾರದ ಮೇಲೆ, ಒಂದು ಕ್ರಾಪ್ ಹಾಳಾಗುತ್ತದೆ. ಅರೀತಿ ಹಾಳಾದ್ದನ್ನು ನೋಡುವುದಿಲ್ಲ. ಹ್ಯೂಮನ್ ಇನ್‌ಷೂರೆನ್ಸ್‌ನಲ್ಲಿ ಒಬ್ಬ ಮನುಷ್ಯ ಸತ್ತ ಅಂದರೆ. ಅವನಿಗೆ ಇನ್‌ಷೂರೆನ್ಸ್ ಕೊಡುವಂತಾದ್ದು, ಒಂದು ತಾಲ್ಲೂಕಿನಲ್ಲಿ ಯಾರಾದರೂ ಒಬ್ಬರು ಸತ್ತರೆ, ಇಡೀ ತಾಲ್ಲೂಕಿನ ವರಮಾನ. ಸತ್ತು ಹೋದವರು ಯಾರು, ಬದುಕಿದ್ದವರು ಯಾರು ಎಂದು ನೋಡಿ ಕೊಡುವುದಿಲ್ಲ. ಆ ತಾರತಮ್ಯ ಇಲ್ಲಿ ಏಕೆ ಮಾಡುತ್ತೇವೆ. ಪರಿಹಾರ ಹಾನಿಯಾದ ಭಾಗಕ್ಕೇ ಹೊರತು ಬೇರೆ ಭಾಗಕ್ಕೆ ಅಲ್ಲ. ಬೇರೆ ಭಾಗದಲ್ಲಿ ಏನೂ ಹಾಳಾಗಿರುವುದಿಲ್ಲ. ಅದರ ಆಧಾರದ ಮೇಲೆ ಕ್ರಾಪ್ ಇನ್‌ಷೂರನ್ಸ್ ಮಾಡಿದರೆ, ಏನು ಪ್ರಯೋಜನವಾಗುತ್ತದೆ. ಎಮ್ಮೆಗೆ ಜ್ವರ ಬಂದರೆ, ಎತ್ತಿಗೆ ಬರೆ ಹಾಕಿದರು ಎಂಬ ಗಾದೆ ಇದೆ. ಹಾಗೆ. ಯಾವುದೋ ಸರಿ ಮಾಡುವುದಕ್ಕೆ ಹೋಗಿ, ಯಾವುದನ್ನೋ ಚಿಕಿತ್ಸೆ ಮಾಡುವಂಥಾದ್ದು. ಯಾರಿಗೋ ಇದರ ಫಲವನ್ನು ಕೊಡುವಂಥಾದ್ದು. ಕರ್ನಾಟಕದಲ್ಲಿ ಎಷ್ಟು ಕಡೆಯಲ್ಲಿ ಇದರ ಪ್ರಯೋಜನವಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ವಿಶೇಷವಾಗಿ ನಾನು ಹೇಳುವಂಥಾದ್ದು ಏನೆಂದರೆ, ನಾನು ಹಿಂದೆ ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷನಾಗಿದ್ದಾಗ ಇದನ್ನು ವಿರೋಧ ಮಾಡಿದ್ದೆ. ಎಲ್ಲಿ ಮಳೆ ಬರುತ್ತದೆ, ನೆರೆ ಬರುತ್ತದೆ, ಕ್ರಾಪ್‌ಗಳು ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ ಅಲ್ಲಿ ಯಾವ ಒಂದು ಇನ್‌ಷೂರೆನ್ಸ್ ಸಿಗುವುದಿಲ್ಲ. ಕೊನೆಗೆ ಏನಾಗುತ್ತದೆಂದರೆ. ಸರ್ವೆ ನಡೆಯುತ್ತದೆ. ಸರ್ವೆ ನಡೆಯುವಂಥ, ಚೆಕ್ ಮಾಡುವಂಥ ಅಧಿಕಾರ ಕೂಡ ಯಾರೋ ಒಬ್ಬರು ಅಧಿಕಾರಿಗಳಿಗೆ ಕೊಟ್ಟುಬಿಟ್ಟಿದ್ದಾರೆ. ಈ ರೀತಿ ತೊಂದರೆಯಾಗುವಂಥಾದ್ದು ಒಂದು. ಎರಡನೆಯದು ಮಂಡಲ್ ಮಟ್ಟದಲ್ಲಿ, ಮುಂದೆ

ರೂಪುಗೊಳ್ಳುವ ಯೋಜನೆ ಏನು ಎನ್ನುವುದನ್ನು ಹೇಳಿದ್ದಾರೆ. ಅದು ರೂಪುಗೊಳ್ಳುವವರೆಗೆ ಕೊನೇ ಪಕ್ಷ, ಮಂಡಲ್ ಮಟ್ಟದಲ್ಲಿ ರೂಪುಗೊಳ್ಳುವವರೆಗೆ ಈ ಯೋಜನೆಯನ್ನು ಸ್ಟಾಪ್ ಮಾಡಿಸಲಿ. ಯಾರಿಗೆ ಈ ಯೋಜನೆ. ನಾವು ಇವತ್ತು ಪ್ರಿಮಿಯಮನ್ನು ಕಲೆಕ್ಟ್ ಮಾಡಿ, ಎಮಾ ಸಂಸ್ಥೆಗಳು ಹೊಟ್ಟೆಹೊರಿಯುವುದು. ಎಮಾ ಸಂಸ್ಥೆಗಳಲ್ಲಿರುವ ಕೆಲಸಗಾರರಿಗೆ, ಸಂಬಳ ಕೊಡುವುದಕ್ಕೆ ರೈತರು ಪ್ರೀಮಿಯಂ ಕೊಡುವುದಾದರೆ, ಇದು ರೈತರ ಎಮಾ ಯೋಜನೆ ಅಲ್ಲ. ಬೇಸಾಯದ ಬೆಳೆಯ ಎಮಾ ಯೋಜನೆ ಅಲ್ಲ. ಇದರ ಬಗ್ಗೆ ಸರ್ಕಾರ ದೀರ್ಘವಾದ ಚಿಂತನೆ ನಡೆಸಬೇಕು. ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಅಧ್ಯಕ್ಷರೇ, ಈಗಿರತಕ್ಕ ಪದ್ಧತಿಯಲ್ಲಿ ನಮ್ಮ ರಾಜ್ಯದಲ್ಲಿ ೧೯೮೫-೮೬ರಿಂದ ವ್ಯಾಪಕ ಬೆಳೆ ಎಮಾ ಯೋಜನೆಯನ್ನು ಜಾರಿಗೊಳಿಸಿಕೊಂಡು ಬರಲಾಗುತ್ತಿದೆ. ಜಾರಿಯಲ್ಲಿರತಕ್ಕ ಪದ್ಧತಿಯಲ್ಲಿ ಅನೇಕ ದೋಷಗಳಿವೆ. ಒಟ್ಟು ತಾಲ್ಲೂಕಿನ ಯಾವುದೋ ಒಂದು ಭಾಗದಲ್ಲಿ ತೊಂದರೆ ಇದ್ದು, ಅವರು ನಮಗೆ ರಿಯಾಯಿತಿ ಕೊಡಬೇಕು, ಇದು ನಮಗೆ ಅನ್ವಯಿಸುವಹಾಗೆ ಮಾಡಿಕೊಡಬೇಕು ಎಂದು ಕೇಳಿದರೆ, ಇಡೀ ತಾಲ್ಲೂಕಿನಲ್ಲಿ ಯಾವುದೋ ಮೂಲೆಯಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಿ, ಆ ಅಂಕಿ ಅಂಶಗಳ ಆಧಾರದ ಮೇಲೆ, ಇದನ್ನು ಕೊಡಬೇಕಾಗುತ್ತದೆ. ಈಗಿರುವ ಪದ್ಧತಿ ಪ್ರಕಾರ. ಅದಕ್ಕೆ ನಾವು ಈ ಪದ್ಧತಿಯನ್ನು ಬದಲಾವಣೆ ಮಾಡಿ ಪ್ರತಿಯೊಂದು ಮಂಡಲಕ್ಕೂ ಸಂಬಂಧಪಟ್ಟಹಾಗೆ, ಯಾವ ಯಾವ ಬೆಳೆಗಳಿಗೆ, ಏನು ತೊಂದರೆಯಾಗಿದೆ, ಎಷ್ಟೆಷ್ಟು ಬೆಳೆ ಬಂದಿದೆ ಎಂಬುದನ್ನೆಲ್ಲಾ ನಾವು ನಿರ್ಧಾರವಾಗಿ ಅಂಕಿಅಂಶಗಳ ಸಮೇತ ತಿಳಿದುಕೊಂಡು ಆಮೇಲೆ ಇದನ್ನು ಜಾರಿಗೆ ಕೊಡುವುದರಿಂದ, ಈ ಕಷ್ಟವರಿಹಾರವಾಗುತ್ತದೆ ಎಂದು ತಿಳಿದು ಕೇಂದ್ರ ಸರ್ಕಾರದ ಜೊತೆ ವ್ಯವಹಾರ ಮಾಡಿ, ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಹಾಸನ ಜಿಲ್ಲೆಯಲ್ಲಿ ಕೆಲವು ಪ್ರಯೋಗಗಳನ್ನು ನಾವು ಮಾಡುತ್ತಾ ಇದ್ದೇವೆ. ಅದೇ ಪ್ರಯೋಗವನ್ನು ಎಲ್ಲಾ ಕಡೆಯಲ್ಲಿಯೂ ಅನುಸರಿಸಿ, ಇವರಿಗೆ ಸಹಾಯಸಿಕ್ಕುವಹಾಗೆ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶವಾಗಿದೆ.

ಅಧ್ಯಕ್ಷರು:- ಹಿಮಾಚಲ ಪ್ರದೇಶದ ವಿಧಾನ ಸಭಾಧ್ಯಕ್ಷರಾದ ಶ್ರೀ ಠಾಕೂರ್‌ಸೇನ್ ನೇಗೆಯವರು, ವಿಧಾನ ಸಭೆಯ ಅಧ್ಯಕ್ಷರ ವೀಕ್ಷಕರ ಗ್ಯಾಲರಿಯಲ್ಲಿ ಕುಳಿತು ನಮ್ಮ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿದ್ದಾರೆ. ಈ ಸಭೆಯ ಎಲ್ಲಾ ಸದಸ್ಯರ ಪರವಾಗಿ, ಅವರನ್ನು ಸ್ವಾಗತಿಸುತ್ತೇನೆ.

ವಿಷಯ:- ರಸಗೊಬ್ಬರದ ವಿತರಣೆಗಾಗಿ ಕೇಂದ್ರದಿಂದ ಬಿಡುಗಡೆಮಾಡಿದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೫೧:- (೯೩)
ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)
ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಸಗೊಬ್ಬರಗಳ ಮೇಲಿನ ಸಬ್ಸಿಡಿ ಕೇಂದ್ರ ಸರ್ಕಾರ ವಾಪಸ್ ಪಡೆದ ನಂತರ ರಾಜ್ಯದ ರೈತರಿಗೆ ರಸಗೊಬ್ಬರದ ವಿತರಣೆಗಾಗಿ ಕೇಂದ್ರ ಸರ್ಕಾರದಿಂದ ಇವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು?

ಆ) ಇದರಲ್ಲಿ ಇದುವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಇ) ಎಷ್ಟು ಜನ ರೈತರಿಗೆ ಇದರಿಂದ ಪ್ರಯೋಜನವಾಗಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ
(ಕೃಷಿ ಸಚಿವರು)